1ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 1480/2022**

ಚಾಸಾ - **15**

**ಪ್ರಾ.ಸಾ. - 8**

**ಸಾಕ್ಷಿದಾರರ ಹೆಸರು** : ಮೋಹನ್ ಶಂಕರ ಮಾವನಕರ್

**ಸಾಕ್ಷಿದಾರರ ವಯಸ್ಸು** : **58** ವರ್ಷ

**ಸಾಕ್ಷಿದಾರರ ಉದ್ಯೋಗ**: ಎ ಎಸ್ ಐ

**ಸಾಕ್ಷಿದಾರರ ವಿಳಾಸ** : ದೊಡ್ಡವಾಡ ಪೋಲಿಸ ಠಾಣೆ

---

**ಪ್ರಮಾಣ ವಚನ ಮಾಡಿದ ದಿನಾಂಕ : 25.09.2025.**

**ಮುಖ್ಯ ವಿಚಾರಣೆ : ಎಪಿಪಿ ಅವರಿಂದ**

**2020** ರಿಂದ ಇಲ್ಲಿಯವರೆಗೂ ದೊಡ್ಡವಾಡ ಪೋಲಿಸ ಠಾಣೆ ಎ ಎಸ್ ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿ. **09.03.2022** ರಂದು ನಾನು ಠಾಣಾ ಪ್ರಬಾರದಲ್ಲಿದ್ದಾಗ ಚಾಸಾ **1** ರವರು ಅಪಘಾತ ಸಂಬಂದ ದೂರು ನೀಡಿರುತ್ತಾರೆ. ದೂರನ್ನು ಗುನ್ನಾ **17/2022** ಎಂದು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ **1** ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿಯ ಸಹಿಯನ್ನು ನಿಪಿ **1**ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **18** ಮತ್ತು ಸಾಕ್ಷಿಯ ಸಹಿಯನ್ನು ನಿಪಿ **18**ಎ ಎಂದು ಗುರುತಿಸಲಾಯಿತು. ನಮಗೆ ಕೆ ಎಮ್ ಸಿ ಹುಬ್ಬಳ್ಳಿಯಿಂದ ಎಮ್ ಎಲ್ ಸಿ ವರದಿ ಬಂದಿರುತ್ತದೆ. ದಿ. **10.03.2022** ರಂದು ಚಾಸಾ **2** ಮತ್ತು **3** ರವರ ಸಮಕ್ಷಮ ಅಪಘಾತ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ **09.00** ರಿಂದ **9.45** ರವರೆಗೆ ಮಾಡಿರುತ್ತೇವೆ. ನಕ್ಷೆ ತಯಾರಿಸಿದೆವು. ಸಾಕ್ಷಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ **2** ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿಯ ಸಹಿಯನ್ನು ನಿಪಿ **2**ಡಿ ಎಂದು ಗುರುತಿಸಲಾಯಿತು. ಸಾಕ್ಷಿ ನಕ್ಷೆಯನ್ನು ನಿಪಿ **19** ಎಂದು ನಕ್ಷೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **19**ಎ ಎಂದು ಗುರುತಿಸಲಾಯಿತು. **2** ಪೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **4** ಮತ್ತು **5** ಎಂದು

ಗುರುತಿಸಲಾಗಿದೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 20 ಎಂದು ಗುರುತಿಸಲಾಯಿತು. ಅದೇ ದಿನ ಅಪಘಾತಕ್ಕೆ ಒಳಗಾದ ವಾಹನ ತಡೆ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ 10.00 ಗಂಟೆಯಿಂದ 10.30 ರವರೆಗೆ ಜರುಗಿಸಲಾಯಿತು. ವಾಹನ ತಡ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಪಿ 3ಡಿ ಎಂದು ಗುರುತಿಸಲಾಗಿದೆ. 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 6 ಮತ್ತು 7 ಎಂದು ಗುರುತಿಸಲಾಗಿದೆ. ಅದೇ ದಿನ 304ಎ ಅಳವಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ. ಶವ ಪಂಚನಾಮೆಯನ್ನು ಜರುಗಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ 1 ರವರ ಮರುಹೇಳಿಕೆ ಪಡೆದಿರುತ್ತೇನೆ. ಚಾಸಾ 6 ರಿಂದ 9 ರವರ ಹೇಳಿಕೆ ಮತ್ತು ಮರುಹೇಳಿಕೆ ಪಡೆದಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ 16 ರವರಿಗೆ ನೀಡಿರುತ್ತೇನೆ.

ಪಾಟೀ **ಸವಾಲುಃ ಆರೋಪಿ ಪರ ವಕೀಲರಿಂದ ಃ**

ಅಪಘಾತವಾದ ಬಗ್ಗೆ ಠಾಣೆಗೆ ಬಂದು ಮಾಹಿತಿ ನೀಡಿರುತ್ತಾರೆ. ಪೋಲಿಸ್ ಠಾಣೆಯಿಂದ ಘಟನಾ ಸ್ಥಳ 7-8 ಕಿ. ಮೀ ದೂರದಲ್ಲಿದೆ. ಘಟನಾ ಸ್ಥಳಕ್ಕೆ ಹೋದಾಗ ಸಮಯ 08.40 ಆಗಿತ್ತು. ದೂರು ನೀಡಲು ಏಕೆ ತಡವಾಯಿತು ಎಂದರೆ ಸಾಕ್ಷಿ ಆಸ್ಪತ್ರೆಗೆ ಹೋಗಿದ್ದರು ಎನ್ನುತ್ತಾರೆ. ಘಟನಾ ಸ್ಥಳದ ಅಕ್ಕಪಕ್ಕ ಜನ ವಸತಿ ಪ್ರದೇಶ ಇದೆ ಎಂದರೆ ಸಾಕ್ಷಿ ಒಂದು ಮನೆ ಇದೆ ಎನ್ನುತ್ತಾರೆ. ಅಪಘಾತ ಸ್ಥಳದಲ್ಲಿರುವ ಜನರ ಹೇಳಿಕೆ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ನೀವು ಹೇಳಿದ ರೀತಿ ಯಾವುದೇ ಘಟನೆ ಯಾಗಿರುವುದಿಲ್ಲ ಹಾಗೂ ನೀವು ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಘಟನಾ ಸ್ಥಳದಲ್ಲಿ ಯಾವುದೇ ಸಾಕ್ಷಿಗಳ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸ್ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಅಂಕಿ ಅಂಶ ಸಲುವಾಗಿ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. ದೂರನ್ನು ನೀವು ನಿಮಗೆ ಅನುಕೂಲವಾಗುವ ರೀತಿ ಬರೆಸಿ ತೆಗೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ನಿರಪರಾಧಿ ಎಂದು ಗೊತ್ತಿದ್ದರು ಸಹ ಆತನ ವಿರುದ್ಧ ದೂರು ದಾಖಲಿಸಿ ದೋಷರೋಪಣಾ ಪಟ್ಟಿಯನ್ನು

ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಹೇಳಿಕೆ ಹಾಗೂ ಮರುಹೇಳಿಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳು ಹೇಳಿದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಾ ಇದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ